# ನವರಸಪುರದ ಧಾರ್ಮಿಕೇತರ ಪಾರಂಪರಿಕ ಕಟ್ಟಡಗಳು ಮತ್ತು ಜವಾಬ್ದಾರಿ

**ಸಂಗಮೇಶ ಕಚ್ಚು[1] & ಎಂ.ಎನ್. ಬೆನ್ನೂರ[2]**

[1]ಎಂ.ಎ. ಪಿಜಿ ಡಿಪ್ಲೋಮಾ ಇನ್ ಅರ್ಕವಲ್, ಮೋಡಿ ಸ್ಟಡಿ.

[2]ಮುಖ್ಯಸ್ಥರು, ಇತಿಹಾಸ ವಿಭಾಗ, ಎಸ್. ಟಿ. ಸಿ. ಕಾಲೇಜು, ಬನಹಟ್ಟಿ.

DOI: https://doi.org/10.5281/zenodo.17295849

## ABSTRACT:

ನವರಸಪುರ – ಅದು ಕೇವಲ ಒಂದು ನಗರವಲ್ಲ, ಅದು ಆದಿಲ್ ಶಾಹಿಯ ಕಲಾ, ಸಂಸ್ಕೃತಿ, ಮತ್ತು ವೈಭವದ ಜೀವಂತ ಪ್ರತಿಮೆಯಾಗಿದೆ; ಇಲ್ಲಿ ನವರಸ್ ಮಹಲ್, ನಾರಿ ಮಹಲ್, ತಿಗಣಿ ಮಹಲ್, ಶಹನವಾಜ್ ಖಾನನ ವಾಡೆ ಇತ್ಯಾದಿ ಶಿಲ್ಪಕಲೆಯ ಮೌನ ಸಾರಥಿಗಳಾಗಿ ಇಂದಿಗೂ ಇತಿಹಾಸವನ್ನ ಕಥೆ ಹೇಳುತ್ತಿವೆ. ನವರಸಪುರ ನಗರವು ಆದಿಲ್ ಶಾಹಿ ಕಾಲದ ಸಾಂಸ್ಕೃತಿಕ ನಗರವಾಗಿತ್ತು. ಹಲವಾರು ರೀತಿಯ ಕಲಾತ್ಮಕ ಶಿಲ್ಪ ಶೈಲಿ ಮತ್ತು ವೈಭವಯುತವಾದ ಕಟ್ಟಡ ಹೊಂದಿದ ಯೋಜಿತ ನಗರವಾಗಿತ್ತು. ಧಾರ್ಮಿಕೇತರ ಎಂದರೆ ಸಾಮಾನ್ಯವಾಗಿ ಅರಮನೆ, ಉದ್ಯಾನವನಗಳು, ಕಾರಂಜಿಗಳು, ಸಂಗೀತಕ್ಕೆ ಕಟ್ಟಡಗಳನ್ನ ಒಳಗೊಂಡಿತ್ತು. ಹೀಗಾಗಿ ಎರಡನೇ ಇಬ್ರಾಹಿಂ ಆದಿಲ್ ಶಾಹಿಯು ತನ್ನ ಜೀವನದ ಬಹುಭಾಗವನ್ನ ಇಲ್ಲಿ ಕಳೆದನು. ನವರಸಪುರ ನಗರ ಆದಿಲ್ ಶಾಹಿ ಕಾಲದ ಉಪನಗರ ಮತ್ತು ನವರಸ್ ಮಹಲ್, ನಾರಿ ಮಹಲ್, ತಿಗಣಿ ಮಹಲ್, ಶಹನವಾಜ ಖಾನನ ವಾಡೆ ಕಾಣಬಹುದು. ನವರಸಪುರದ ಧಾರ್ಮಿಕೇತರ ಪಾರಂಪರಿಕ ಕಟ್ಟಡಗಳು ಸಾಂಸ್ಕೃತಿಕ, ಐತಿಹಾಸಿಕ ಮತ್ತು ವೈಶಿಷ್ಟ್ಯಪೂರ್ಣ ಶೈಲಿಯ ಪ್ರತಿರೂಪಗಳಾಗಿವೆ. ಇವು ಕಾಲಾನುಗತವಾಗಿ ಹಾಳಾಗುತ್ತಿರುವುದರಿಂದ ಸಂರಕ್ಷಣೆಯ ಅಗತ್ಯತೆ ಹೆಚ್ಚುತ್ತಿದೆ. ಈ ಕಟ್ಟಡಗಳು ಧಾರ್ಮಿಕ ಸ್ವರೂಪವಿಲ್ಲದಿದ್ದರೂ, ಸಮುದಾಯದ ಚರಿತ್ರೆ, ದಿನಚರಿ ಮತ್ತು ಸ್ಥಳೀಯ ಪರಂಪರೆಯ ಪ್ರತಿರೂಪವಾಗಿವೆ. ನಗರೀಕರಣ, ನಿರ್ಲಕ್ಷ್ಯ ಮತ್ತು ಸಂರಕ್ಷಣೆಯ ಕೊರತೆಯಿಂದ ದಡದಲ್ಲಿವೆ (ಇದು 'ಅಪಾಯದಲ್ಲಿವೆ' ಎಂಬ ಅರ್ಥ ಕೊಡುವ ಪದವಾಗಿರಬಹುದು, ಆದರೆ ಮೂಲ ಲೇಖನ ಬದಲಿಸಿಲ್ಲ). ಈ ಅಧ್ಯಯನ, ಇಂಥ ಕಟ್ಟಡಗಳ ಮಹತ್ವವನ್ನು ವಿವರಿಸುತ್ತಿದ್ದು, ಸ್ಥಳೀಯ ಸಂಸ್ಥೆಗಳು, ಸರ್ಕಾರ ಹಾಗೂ ನಾಗರಿಕರು ಸಂರಕ್ಷಣೆಯಲ್ಲಿ ಪಾತ್ರವಹಿಸುವ ಅಗತ್ಯವನ್ನು ಎತ್ತಿಹಿಡಿಯುತ್ತದೆ.

## KEYWORDS:

ನೌರಸ, ಉಡತಾ, ಮಹಲ್, ತಗಣಿ, ವಾಡೆ.

**ಪೀಠಿಕೆ:**

ಪ್ರತಿಯೊಂದು ನಗರಕ್ಕೂ ಅದರ ಐತಿಹಾಸಿಕ ಕಟ್ಟಡಗಳು, ನಿರೂಪಣೆಯ ಅಗತ್ಯವಿಲ್ಲದ ಕತೆಗಳನ್ನು ಹೇಳುತ್ತಾ ನಿಂತಿರುತ್ತವೆ. ನವರಸಪುರವೂ ಇಂಥ ಒಂದು ನಗರ – ಇತಿಹಾಸ ಮತ್ತು ಸಂಸ್ಕೃತಿಯ ತೋಳೆದ ಚಿಹ್ನೆಗಳನ್ನು ಬಿಂಬಿಸುವ ಸ್ಥಳ. ಇಲ್ಲಿ ಧಾರ್ಮಿಕ ಕಟ್ಟಡಗಳಷ್ಟೇ ಅಲ್ಲ, ಧಾರ್ಮಿಕೇತರ ಪಾರಂಪರಿಕ ಕಟ್ಟಡಗಳೂ ವಿಶಿಷ್ಟ ಶೈಲಿ, ಕಾಲೋಚಿತ ತಂತ್ರಜ್ಞಾನ ಹಾಗೂ ನಾಡಿನ ಸಂಸ್ಕೃತಿಯ ಧ್ವನಿಯಾಗಿವೆ. ಮನೋಹರ ಗೋಡೆಗಳು, ಕಾಲಾನುಗತ ವಿನ್ಯಾಸಗಳು, ಹಾಗೂ ಸಾಂಸ್ಕೃತಿಕ ಸಂಚಯಗಳನ್ನು ಹೊಂದಿರುವ ಈ ಕಟ್ಟಡಗಳು ಇಂದು ಮರೆಯಲ್ಪಡುತ್ತಿರುವುದು ಆತಂಕಕಾರಿ ಸಂಗತಿ. ಅತ್ಯಾಧುನಿಕತೆಯ ಮುನ್ನುಗ್ಗುವಿಕೆಯ ಮಧ್ಯೆ, ಇಂತಹ ಕಟ್ಟಡಗಳು ನಗರದ ವಿಕಾಸದ ಜವಾಬ್ದಾರಿಗಳ ಹೆಸರಿನಲ್ಲಿ ಅಸ್ತಿತ್ವ ಕಳೆದುಕೊಳ್ಳುತ್ತಿವೆ. ಸಂರಕ್ಷಣೆ ಎಂಬ ಶಬ್ದವು ಕೇವಲ ಧಾರ್ಮಿಕ

ಕಟ್ಟಡಗಳಿಗೆ ಮಾತ್ರ ಸೀಮಿತವಾಗದೇ, ಇಂಥ ಧಾರ್ಮಿಕೇತರ ಕಟ್ಟಡಗಳಿಗೂ ಅನ್ವಯಿಸಬೇಕು. ಈ ಅಧ್ಯಯನವು ನವರಸಪುರದ ಇಂಥ ಪಾರಂಪರಿಕ ಕಟ್ಟಡಗಳ ಮಹತ್ವವನ್ನು ಪುನರುಚ್ಚರಿಸಿ, ಅವುಗಳ ಉಳಿವಿಗಾಗಿ ನಾವೆಲ್ಲರೂ ಹೊರುವ ಜವಾಬ್ದಾರಿಯ ಕುರಿತಾದ ಚರ್ಚೆಗೆ ದಾರಿ ಮಾಡಿಕೊಡುತ್ತದೆ.

**ನವರಸಪುರ ಉಪರಾಜಧಾನಿ ನಿರ್ಮಾಣ**

ನವರಸಪುರವೆಂಬ ಸುಂದರವಾದ ನಗರವನ್ನು ಕ್ರಿ.ಶ. 1599 ರಿಂದ 1624 ರಲ್ಲಿ ಆದಿಲ್ ಶಾಹಿಗಳಲ್ಲಿಯೇ ಪ್ರಸಿದ್ಧನಾದ ಎರಡನೇ ಇಬ್ರಾಹಿಂ ಆದಿಲ್ ಶಾಹಿ ಈ ನಗರವನ್ನ ನಿರ್ಮಿಸಿದನು. ಇದು ಆದಿಲ್ ಶಾಹಿಗಳ ಉಪರಾಜಧಾನಿ ಆಗಿತ್ತು. ಶಹನವಾಜ್ ಖಾನ್ ರವರ ನೇತೃತ್ವದಲ್ಲಿ ಈ ನಗರವನ್ನು ನಿರ್ಮಿಸಿದರು. ಇದು ಬಿಜಾಪುರ ನಗರದ ಪಶ್ಚಿಮಕ್ಕೆ 5 ಕಿ.ಮಿ. ದೂರದಲ್ಲಿರುವ ನವರಸಪುರಕ್ಕೆ ಎರಡನೇ ಇಬ್ರಾಹಿಂ ಆದಿಲ್ ಶಾಹಿ ತನ್ನ ರಾಜಧಾನಿಯನ್ನು ಸ್ಥಳಾಂತರ ಮಾಡಲು ಮುಂದಾದನು. ಏಕೆಂದರೆ ನವರಸಪುರ ತೊರವಿ ಗ್ರಾಮದಿಂದ ಸ್ವಲ್ಪ ದೂರದಲ್ಲಿದ್ದು ನೀರಿನ ವ್ಯವಸ್ಥೆಯು ಉತ್ತಮವಾಗಿತ್ತು. ಇನ್ನೇನು ನವರಸಪುರದ ಕಟ್ಟಡದ ಎಲ್ಲಾ ಕೆಲಸವು ಮುಗಿಯುವ ಸಂದರ್ಭದಲ್ಲಿ ಬಿಜಾಪುರದಿಂದ ನವರಸಪುರಕ್ಕೆ ರಾಜಧಾನಿ ವರ್ಗಾವಣೆ ಮಾಡುವುದರಿಂದ, ಸಾಮ್ರಾಜ್ಯಕ್ಕೆ ಆಪತ್ತು ಬರಬಹುದೆಂದು ಜ್ಯೋತಿಷಿಗಳು ಇಬ್ರಾಹಿಂ ಆದಿಲ್ ಶಾಹಿಗೆ ಹೇಳಿದರು. ಹೀಗಾಗಿ ರಾಜಧಾನಿಯನ್ನು ವರ್ಗಾವಣೆ ಮಾಡದೆ ಇಬ್ರಾಹಿಂ ಆದಿಲ್ ಶಾಹಿಯು ತನ್ನ ಜೀವನದ ಬಹುಭಾಗವನ್ನು ನವರಸಪುರದಲ್ಲಿ ಕಳೆದನು.

**ಅರಮನೆಗಳು / ಮಹಲಗಳು**

**1) ನವರಸ ಮಹಲ್**

ಗಹನ್ ಮಹಲ್ ದ ಪ್ರತಿರೂಪವನ್ನ ಹೋಲುತ್ತಿರುವ ಈ ನವರಸ ಮಹಲ್ ಅದಕ್ಕಿಂತ ಸ್ವಲ್ಪ ಚಿಕ್ಕದಾಗಿದೆ. ಮಹಲದ ಮುಂಭಾಗದಲ್ಲಿರುವ ಮೂರು ಕ್ರಮಾನುಗಳುಳ್ಳ ಪ್ರವೇಶ ದ್ವಾರವಿದೆ. ಮಧ್ಯದಲ್ಲಿರುವ ದ್ವಾರವು ಎತ್ತರವಾಗಿದೆ ಮತ್ತು ವಿಶಾಲವಾದ ಕಮಾನು ಹೊಂದಿದೆ. ಅಕ್ಕಪಕ್ಕದ ಕಮಾನುಗಳು ಚಿಕ್ಕದಾಗಿವೆ. ಛತ್ತವು ಸಂಪೂರ್ಣ ನಾಶವಾಗಿದೆ. ಈ ಮಹಲ್ ಕಟ್ಟುವಾಗ ಅಲಂಕಾರಣೆಗಾಗಿ ಹೆಚ್ಚು ಕಟ್ಟಿಗೆಯನ್ನ ಬಳಸಲಾಗಿತ್ತು. ನವರಸ ಮಹಲ್ ಎರಡು ಅಂತಸ್ತಿನ ಕಟ್ಟಡವಾಗಿದ್ದು ವಿಶಾಲ ಸಭಾಂಗಣ ಹೊಂದಿದೆ. ಕಟ್ಟಡದ ಬಾಗಿಲು ಮತ್ತು ಕಿಟಕಿಗಳು ಕಟ್ಟಿಗೆಯ ಅಲಂಕಾರದಿಂದ ಕೂಡಿದ್ದು, ಅವು ಪ್ರಸ್ತುತ ನಾಶ ಹೊಂದಿವೆ. ಮಹಲಿನ ಮೇಲಕ್ಕೆ ಹೋಗಲು ಕಟ್ಟಡದ ಹಿಂದಿನ ಗೋಡೆಯ ಹಿಂಬದಿಯಲ್ಲಿರುವ ಮೆಟ್ಟಿಲುಗಳು ಸಹ ಶಿಥಿಲಗೊಂಡಿವೆ. ಈ ಕಟ್ಟಡವು ಇರಾನಿ ವಾಸ್ತು ಶೈಲಿಯನ್ನ ಒಳಗೊಂಡಿದೆ. ನವರಸ ಮಹಲ್ ಕಾರಂಜಿ ಬಿಜಾಪುರದ ಇತಿಹಾಸ ಪ್ರಸಿದ್ಧ ಸ್ಮಾರಕಗಳಲ್ಲಿ ಒಂದು. ಇದು ಆದಿಲ್ ಶಾಹಿ ರಾಜವಂಶದ ಸೌಂದರ್ಯಪ್ರಿಯತೆ ಮತ್ತು ಕಲಾತ್ಮಕತೆಗೆ ಸಾಕ್ಷಿಯಾದ ಕಲೆಮಣಿಯಾಗಿದೆ. "ನವರಸ" ಎಂಬ ಪದವು ಒಂಬತ್ತು ಭಾವನೆಗಳನ್ನು ಸೂಚಿಸುತ್ತದೆ – ಶೃಂಗಾರ, ಹಾಸ್ಯ, ಕರುಣಾ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ ಮತ್ತು ಶಾಂತ. ಈ ಭಾವಗಳನ್ನು ಪ್ರತಿಬಿಂಬಿಸುವ ಕಲಾತ್ಮಕತೆ ನವರಸ ಮಹಲ್‌ನ ಕಾರಂಜಿಯಲ್ಲಿ ಮೂಡಿಬಂದಿದೆ.

**2) ನಾರಿ ಮಹಲ್**

ಈ ನಾರಿ ಮಹಲವು ನವರಸಪುರದಲ್ಲಿದೆ. ನವರಸ ಮಹಲಗೆ ಹೊಂದಿಕೊಂಡಿದೆ.

ನವರಸ್ ಮಹಲ್ ಹಿಂಬದಿಯಲ್ಲಿ ಈ ಮಹಲ್ಗೆ ಬರಲು ಎರಡು ವಿಶಾಲವಾದ ಕಮಾನುಗಳಿವೆ. ಮಹಲಿನ ಗೋಡೆಗಳು ಕೂಡ ಶಿಥಿಲಗೊಂಡಿವೆ. ಮಹಲ್ನಲ್ಲಿ ಕಮಾನುಗಳು ಹಾಗೂ ಬೃಹತಾಕಾರದ ಹಜಾರ ಮತ್ತು ಪ್ರವೇಶ ದ್ವಾರಗಳು ಕಂಡುಬರುತ್ತವೆ. ಈ ಕಟ್ಟಡಕ್ಕೆ ನೀರನ್ನ ಪೂರೈಕೆ ಮಾಡುವ ಕೊಳಗಳು ಬಾಳು (ಬಹುಶಃ 'ಬಾಳು ಬಿದ್ದಿವೆ' ಬದಲಿಗೆ 'ಹಾಳು ಬಿದ್ದಿವೆ' ಇರಬಹುದು, ಆದರೆ ಮೂಲ ಬದಲಿಸಲಾಗಿಲ್ಲ) ಬಿದ್ದಿವೆ. ಮಹಮ್ಮದ್ ಇಬ್ರಾಹಿಂ ಜುಬೇರಿಯು ಕಟ್ಟಡದ ಕುರಿತಾಗಿ ಮತ್ತು ನವರಸಪುರದ ಕುರಿತಾಗಿ ಉಲ್ಲೇಖಿಸಿದ್ದಾನೆ. ಈ ಮಹಲ್ನಲ್ಲಿ ಸೋನೇರಿ ಬಣ್ಣದ ಚಿತ್ರಗಳನ್ನು ಬಿಡಿಸಿದ್ದಾರೆ.

**ವಾಸ್ತುಶಿಲ್ಪ ಶೈಲಿ**

- ನಾರಿ ಮಹಲ್ನಲ್ಲಿ ಇಂಡೋ–ಇಸ್ಲಾಮಿಕ್ ಶೈಲಿ ಹಾಗೂ ಪರ್ಷಿಯನ್ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ.
- ಪ್ರವೇಶದ್ವಾರಗಳು: ಭವ್ಯ ಬಾಗಿಲುಗಳು, ಸುಂದರ ಕೆತ್ತನೆಯ ಅಲಂಕಾರಗಳು.
- ಆಂಗಣ: ಮಧ್ಯಭಾಗದಲ್ಲಿ ವಿಶಾಲ ಆಂಗಣ, ಅಲ್ಲಿ ಕಾರಂಜಿ ಹಾಗೂ ತೋಟ ವ್ಯವಸ್ಥೆ.
- ಮಹಡಿ ವಿನ್ಯಾಸ: ಬೃಹತ್ ಸಭಾಂಗಣಗಳು, ಸಂಗೀತ–ನೃತ್ಯ ಕಾರ್ಯಕ್ರಮಗಳಿಗೆ ವಿಶೇಷ ಕಕ್ಷಿಗಳು.
- ಗೌಪ್ಯತೆ: ಮಹಿಳೆಯರಿಗಾಗಿ ನಿರ್ಮಿಸಲಾದ ಕಾರಣ, ವಾಸ್ತು ವಿನ್ಯಾಸದಲ್ಲಿ ಗೌಪ್ಯತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ.
- ಕಿಟಕಿಗಳು ಜಾಲರಿಗಳೊಂದಿಗೆ ವಿನ್ಯಾಸಗೊಂಡಿದ್ದು, ಹೊರಗಿನವರು ಒಳಗಿನ ಚಟುವಟಿಕೆಗಳನ್ನು ಕಾಣದಂತೆ ಮಾಡಲಾಗಿದೆ.
- ಹವಾಮಾನ ತಂತ್ರಜ್ಞಾನ: ಬಿಸಿಲಿನ ತಾಪವನ್ನು ತಡೆದು ಒಳಗೆ ತಂಪಾದ ವಾತಾವರಣ ಕಾಪಾಡುವ ಉದ್ದೇಶದಿಂದ ಹವಾನಿಯಂತ್ರಣ ಶೈಲಿಯ ಅಳವಡಿಕೆ.

**3) ಶಹನವಾಜ್ ಖಾನನ ವಾಡೆ**

ನವರಸ ಮಹಲದ ಕಟ್ಟಡದ ಉಸ್ತುವಾರಿಯನ್ನ ನೋಡಿಕೊಳ್ಳುತ್ತಿದ್ದ ಬಾದಷಹನ ಮುಲ್ಕಿ ಅಧಿಕಾರಿ ಶಹನವಾಜ್ ಖಾನ್ ತನಗಾಗಿ ಒಂದು ವಾಡೆಯನ್ನು ನವರಸಪುರದಲ್ಲಿ ಕಟ್ಟಿಕೊಂಡಿದ್ದನು. ಇದು ಸುಂದರವಾದ ಬಾಗಿಲು, ಕಿಟಕಿ, ಎತ್ತರವಾದ ಕಟ್ಟಡವಾಗಿತ್ತು. ಈ ಕಟ್ಟಡದಿಂದ ನವರಸ ಮಹಲ್ ಅತ್ಯಂತ ಶೋಭೆಯನ್ನು ಹೊಂದಿತ್ತು ಎಂದು ಮಹಮದ್ ಇಬ್ರಾಹಿಂ ಜುಬೇರಿ ದಾಖಲಿಸಿದ್ದಾನೆ.

**ಶಹನವಾಜ್ ಖಾನನ ವಾಡೆಯ ವಾಸ್ತು ಶೈಲಿಯ ಪ್ರಮುಖ ಲಕ್ಷಣಗಳು:**

- ಮುಘಲ್ ಮತ್ತು ದಕ್ಷಿಣ ಭಾರತೀಯ ಶೈಲಿಯ ಸಂಯೋಜನೆ. ದಕ್ಷಿಣ ಭಾರತದ ವಾಡಾ ಶೈಲಿಯ ಒಳಮನೆ, ಅಂಗಣ, ಮರದ ಕಲೆ.
- ದೊಡ್ಡ ಪ್ರವೇಶ ದ್ವಾರ (ಮಹಾದ್ವಾರ): ಭದ್ರಕೋಟೆಯ ಶೈಲಿಯ ಬೃಹತ್ ಬಾಗಿಲು. ಬಾಗಿಲಿನ ಮೇಲೆ ಕಮಾನು ಆಕೃತಿ.
- ಗಣ (ಕೇಂದ್ರೀಕೃತ ವಿನ್ಯಾಸ): ಮಧ್ಯದಲ್ಲಿ ತೆರೆಯಾದ ಜಾಗ (ಅಂಗಣ). ಅದರ ಸುತ್ತಲು ಕೊಠಡಿಗಳ ವಿನ್ಯಾಸ.
- ಮರದ ಕಲೆ ಮತ್ತು ಅಲಂಕಾರ: ಕಂಬಗಳು, ಕಿಟಕಿಗಳು, ಗ್ಯಾಲರಿಗಳಲ್ಲಿ ತೊಗಲು

ಮರದ ನಾಜೂಕಾದ ಕೆತ್ತನೆ (ಬಹುಶಃ 'ತೊಗಲು ಮರದ' ಬದಲಿಗೆ 'ತೇಗಲು ಮರದ' ಇರಬಹುದು, ಆದರೆ ಮೂಲ ಬದಲಿಸಲಾಗಿಲ್ಲ ).

- ಕಮಾನುಗಳು ಮತ್ತು ಬೃಹತ್ ಹಾಲುಗಳು: ಆಡಳಿತ ಹಾಗೂ ಸಭೆಗಾಗಿ ದೊಡ್ಡ ಹಾಲ್ಗಳು. ಕಮಾನು ಆಕಾರದ ಜಾನಲಿಗಳು (ಬಹುಶಃ 'ಜಾಲರಿಗಳು' ಇರಬಹುದು, ಆದರೆ ಮೂಲ ಬದಲಿಸಲಾಗಿಲ್ಲ ) ಹಾಗೂ ಬಾಗಿಲುಗಳು.

**ಕಾರಂಜಿಗಳು**

**1) ನವರಸ ಮಹಲ್ ಕಾರಂಜಿ**

ನವರಸ ಮಹಲ್ ಹತ್ತಿರದ ಉತ್ತರ ದಿಕ್ಕಿಗೆ, ಮಹಲದ ವೇದಿಕೆಯ ಮುಂದೆ ಚೌಕಕಾರದ ಒಂದು ಬೃಹತ್ ಪುಷ್ಕರಣಿ ಇದೆ. ಈ ಪುಷ್ಕರಣಿಗೆ ತೊರವಿಯಿಂದ ನೀರನ್ನು ಕೊಳವೆಗಳ ಮೂಲಕ ತರಲಾಗಿತ್ತು. ಈ ಮಹಲ್‌ನ ಈಶಾನ್ಯ, ನೈರುತ್ಯ ದಿಕ್ಕುಗಳಲ್ಲಿ ನೀರು ಬರಲು ಮತ್ತು ಹೊರ ಹೋಗಲು ಕಿಂಡಿಗಳನ್ನು ಮಾಡಲಾಗಿತ್ತು. ಪ್ರಸ್ತುತವಾಗಿ ಕಾರಂಜಿ ಕಂಡು ಬರುವುದಿಲ್ಲ, ಆದರೆ ಇಬ್ರಾಹಿಂ ಜುಬೇರಿ ಹೇಳುವಂತೆ, ನವರಸ ಮಹಲ್ ಕಟ್ಟಡ ಕಾರಂಜಿಯಿಂದ ಸ್ವರ್ಗವೇ ಧರೆಗೆ ಇಳಿದು ಬಂದಿರುವಂತೆ ಕಾಣುತ್ತದೆ ಎಂದು ದಾಖಲಿಸಿದ್ದಾನೆ. ನವರಸ ಮಹಲ್ ಕಾರಂಜಿ ಶಿಲ್ಪಕಲೆ ಸುಂದರವಾಗಿ ಕೆತ್ತನೆಯಾದ ಹೂವಿನ ಆಕೃತಿ, ಬೆಳ್ಳಿಯ ಹನಿಗಳಂತೆ ಜಲಧಾರೆ ಸುರಿಯುವ ವಿನ್ಯಾಸಗಳನ್ನು ಹೊಂದಿದೆ. ಕಾರಂಜಿಯ ನೀರು ಮೃದುವಾಗಿ ಹರಿದು ಬರುವಾಗ ಅದನ್ನು ನೋಡುವವರಿಗೆ ಮನಶ್ಶಾಂತಿ ದೊರೆಯುತ್ತದೆ. ಶಿಲಾಶಿಲ್ಪಗಳ ವೈಭವ, ಜಲಧಾರೆಗಳ ಲಯಬದ್ಧ ಆಟ ಹಾಗೂ ನವರಸದ ಭಾವನಾತ್ಮಕ ಸೌಂದರ್ಯ. ಇದು ಕೇವಲ ವಾಸ್ತುಶಿಲ್ಪದ ಕೌಶಲ್ಯವಲ್ಲ, ಭಾವನೆ ಮತ್ತು ಕಲೆಗಳ ಸಂಗಮವಾಗಿದೆ. ರಾಜರು, ಕವಿಗಳು ಮತ್ತು ಸಂಗೀತಗಾರರು ಇಲ್ಲಿಯ ಕಾರಂಜಿಯ ಸಮೀಪ ಕುಳಿತು ಕಾವ್ಯ, ಸಂಗೀತ ಹಾಗೂ ನೃತ್ಯಗಳ ಸೃಷ್ಟಿ ಮಾಡುತ್ತಿದ್ದರು ಎಂದು ಹೇಳಲಾಗುತ್ತದೆ.

**2) ನಾರಿ ಮಹಲ್ ಕಾರಂಜಿ**

ಈ ಮಹಲವು ನವರಸ ಮಹಲಗೆ ಹೋಗುವ ಮಾರ್ಗದ ಎಡಬದಿಯಲ್ಲಿರುವ, ರಕ್ಷಣಾ ಕೋಟೆಯ ಕಮಾನಿನ ದ್ವಾರ ದಾಟಿದ ನಂತರ ಕಾಣುತ್ತದೆ. ಈ ನಾರಿ ಮಹಲ್ ದಕ್ಷಿಣ ದಿಕ್ಕಿನ ರಕ್ಷಣಾ ಗೋಡೆಗೆ ಹೊಂದಿಕೊಂಡಿದ್ದು, ಇದರ ಉತ್ತರ ದಿಕ್ಕಿನಲ್ಲಿ ಪುಷ್ಕರಣಿ ಮಧ್ಯದಲ್ಲಿ ಕಾರಂಜಿಗೆ ಅಳವಡಿಸಿರುವ ಅವಶೇಷಗಳು ಕಂಡುಬರುತ್ತವೆ. ಕೊಳವೆ ಮತ್ತು ಕಿಂಡಿಗಳು ಕಂಡುಬರುತ್ತವೆ. ಇದರ ಸುತ್ತಲೂ ಉದ್ಯಾನವನವಿದ್ದು, ಉದ್ಯಾನವನಕ್ಕೆ ಇಲ್ಲಿಂದ ನೀರು ಪೂರೈಕೆ ಆಗುತ್ತಿತ್ತು. ಎರಡನೆಯ ಅಲಿ ಆದಿಲ್ ಶಾಹಿಯ ಆಸ್ಥಾನದ ಕವಿಯಾದ ಮಿಯಾನು ಸತ್ರಿ ಎಂಬುವನು, ಅಲಿ ಆದಿಲ್ ಶಾಹಿಯ ಕುರಿತು ಎರಡು ಉರ್ದು ಕೃತಿಗಳನ್ನು ರಚಿಸಿದನು. ಗುಲ್ಶನ್ ಇಶ್ಕ್ ಮತ್ತು ಹಲಿನಾಮ. ಇವುಗಳಲ್ಲಿ ಕಾರಂಜಿ ಕುರಿತು ವಿವರಿಸಿದ್ದಾನೆ. ಮಹಲ್‌ನ ಮುಂದೆ ಇರುವ ಕಾರಂಜಿ ಹನಿಗಳನ್ನ ಕಂಡು ಎರಡನೇ ಅಲಿ ಆದಿಲ್ ಶಾ "ಉಡತಾ ಸೆ ಎಫವಾರ ಕಾ ಪಾನೀ ಭಿ ಕ್ಯಾ ನಜಾರ ಹೈ" ಎಂದು ಹೇಳಿದ್ದಾನೆ. ಅಂದರೆ ಕಾರಂಜಿಯಿಂದ ಪುಟಿಯುತ್ತಿದ್ದ ನೀರು ಹೇಗೆ ಚಮತ್ಕಾರವಾಗಿ ಕಾಣುತ್ತದೆ ಮತ್ತು ನಿರ್ಮಲವಾಗಿದೆ ಎಂದನು.

**3) ಮುಸ್ತಫ ಖಾನ್ ಅರಮನೆ ಆವರಣದ ಕಾರಂಜಿ**

ನವರಸಪುರದಿಂದ ಪೂರ್ವಕ್ಕೆ 500 ಗಜಗಳ ದೂರದಲ್ಲಿ ಆದಿಲ್ ಶಾಹಿಗಳ

ವಜಿರನಾದ ಮುಸ್ತಫ ಖಾನನ ಅರಮನೆ ಇದೆ. ಇದರ ಮುಂದೆ ಒಂದು ಬೃಹತಾಕಾರದ ಹೌಜು ಇದೆ. ಇದು ಹಸಿರಿನ ಉದ್ಯಾನವನಗಳಿಂದ ಕೂಡಿದೆ. ಈ ಹೌಜಿನಿಂದ ತುಂಬಿದ ನೀರು ಸಾವಿರ ಸಾವಿರ ಅಲೆಗಳಂತೆ ಹರಿದು ಬಂದು ಸಾಗುತ್ತದೆ ಎಂದು ಹೆನ್ರಿ ಕಜಿನ್ಸ ಅಭಿಪ್ರಾಯ ಕೊಟ್ಟಿದ್ದಾರೆ. ಮುಸ್ತಫಾ ಖಾನ ಅರಮನೆ ಆವರಣದಲ್ಲಿ ಕಾರಂಜಿಯು ಅರಮನೆಯ ಮಧ್ಯಭಾಗದಲ್ಲಿ ಸ್ಥಾಪಿಸಲಾಗಿದೆ. ಸಮಮಿತಿಯಾಗಿ ವಿನ್ಯಾಸಗೊಂಡಿದ್ದು, ಸುತ್ತಲೂ ತೋಟಗಳು, ಕಲ್ಲು ಮತ್ತು ಮರದ ಶಿಲ್ಪಗಳು ಕಾಣಿಸುತ್ತವೆ. ನೆಲದಡಿ ನಿರ್ಮಿಸಲಾದ ಚಾನೆಲ್ಗಳು ನೀರನ್ನು ಕಾರಂಜಿಗೆ ತಲುಪಿಸುತ್ತವೆ. ಜಲ ಹರಿವು ಶಬ್ದರೂಪದಲ್ಲಿ ಸೌಂದರ್ಯ ನೀಡುತ್ತದೆ, ಪ್ರವೇಶಿಸುವವರ ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ. ಬಿಂಬಿಸುವ ನೀರಿನ ಪ್ರಭಾವವು ಅರಮನೆ ಆವರಣಕ್ಕೆ ಶೀತಲತೆ ಮತ್ತು ಆರಾಮ ನೀಡುತ್ತದೆ. ತೊಟ್ಟಿಗಳ ಪರಿಧಿ ಕಲ್ಲಿನ ನಕಶಿ ಮತ್ತು ಹೂವಿನ ಮಾದರಿಗಳಿಂದ ಅಲಂಕರಿಸಲಾಗಿದೆ. ಕಾರಂಜಿಯ ಸುತ್ತಲೂ ಗಜಪಾದ ಚಿಹ್ನೆಗಳು, ಇಸ್ಲಾಮಿಕ್ ಶಿಲ್ಪಕಲೆಯ ವಿನ್ಯಾಸಗಳು ಕಾಣುತ್ತವೆ. ಬೆಳಕು ಮತ್ತು ನೀರಿನ ಪ್ರತಿಬಿಂಬವು ದೃಶ್ಯವನ್ನು ಮತ್ತಷ್ಟು ಆಕರ್ಷಕವಾಗಿಸುತ್ತವೆ. ಅರಮನೆಗೆ ಬರುವ ಅತಿಥಿಗಳು ಕಾರಂಜಿಯ ಶೀತಲತೆ ಮತ್ತು ದೃಶ್ಯದಲ್ಲಿ ಆರಾಮ ಪಡೆಯುತ್ತಾರೆ. ಉತ್ಸವಗಳು, ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳಲ್ಲಿ ಕಾರಂಜಿ ಪ್ರೇಕ್ಷಣೀಯ ಕೇಂದ್ರವಾಗಿತ್ತು.

**ಸಂರಕ್ಷಣೆ ಮತ್ತು ಜವಾಬ್ದಾರಿ**

ಐತಿಹಾಸಿಕ ಕುರುಹುಗಳಿಲ್ಲದೆ ಇತಿಹಾಸ ರಚನೆಯು ಕಷ್ಟವಾಗಿದೆ. ಕುರುಹುಗಳಿಲ್ಲದೆ ರಚಿಸಿದ ಇತಿಹಾಸವು ವ್ಯರ್ಥವಾಗಿದೆ. ಇವುಗಳ ಸಂರಕ್ಷಣೆಯಿಂದ ಇತಿಹಾಸದಲ್ಲಿ ಜರುಗಿದ ಹಲವಾರು ಘಟನೆಗಳನ್ನ ತಿಳಿಯಲು ಅಲ್ಲದೆ ಮುಂದಿನ ಪೀಳಿಗೆಗೆ ನಮ್ಮ ಪರಂಪರೆಯ ಕುರುಹುಗಳನ್ನ ಕುರಿತಾಗಿ ತಿಳಿಸಲು ಸಹಾಯಕವಾಗುತ್ತದೆ. ಸಂರಕ್ಷಣೆ ಎನ್ನುವುದು ಪ್ರತಿಯೊಂದು ಜೀವಿಯ ಜವಾಬ್ದಾರಿ ಆಗಿದೆ. ಸ್ಮಾರಕಗಳ ಸಂರಕ್ಷಣೆಯಿಂದ ನಮ್ಮ ಮಾನವ ವಿಕಾಸದ ಪರಂಪರೆಯನ್ನ ಸಂಕೀರ್ಣಗೊಳಿಸಬಹುದಾಗಿದೆ (ಇಲ್ಲಿ 'ಸಂಕೀರ್ಣಗೊಳಿಸಬಹುದಾಗಿದೆ' ಬದಲಿಗೆ 'ಶ್ರೀಮಂತಗೊಳಿಸಬಹುದಾಗಿದೆ' ಎಂಬ ಅರ್ಥ ಇರಬಹುದು, ಆದರೆ ಮೂಲ ಬದಲಿಸಲಾಗಿಲ್ಲ). ಈ ನಿಟ್ಟಿನಲ್ಲಿ ಸ್ಥಳೀಯ ಜನರು ಮತ್ತು ಸರ್ಕಾರದ ಪಾತ್ರವು ಪ್ರಮುಖವಾಗಿದೆ. ಅಲ್ಲದೆ ಸರ್ಕಾರವು ಐತಿಹಾಸಿಕ ಕುರುಹುಗಳ ಸಂರಕ್ಷಣೆಯ ಅಭಿಯಾನಗಳನ್ನು ಹಮ್ಮಿಕೊಳ್ಳುವ ಮೂಲಕ ಜನರಿಗೆ ತಿಳಿ ಹೇಳುವ ಕಾರ್ಯಕ್ರಮಗಳು ಜರುಗಬೇಕಿದೆ ಮತ್ತು ಇದರ ಕುರಿತಾಗಿ ಜವಾಬ್ದಾರಿಯುತ ಕಾರ್ಯಕ್ರಮಗಳನ್ನು ನಡೆಸುವುದು ಪ್ರಮುಖವಾಗಿದೆ.

**ಉಪಸಂಹಾರ**

ಬಿಜಾಪುರದ ಆದಿಲ್ ಶಾಹಿಗಳು ತಮ್ಮ ಆಡಳಿತದ ಅವಧಿಯಲ್ಲಿ, ಕೇವಲ ರಾಜ್ಯ ವಿಸ್ತರಣೆ ಮಾಡದೇ ವಾಸ್ತುಶಿಲ್ಪಕ್ಕೂ ಕೂಡ ಗಮನವನ್ನು ನೀಡಿದ್ದಾರೆ. ರಾಜ್ಯಧಾನಿಗಳಲ್ಲಿ ವಾಸ್ತುಶಿಲ್ಪಗಳನ್ನ ನಿರ್ಮಿಸಿದರು ಕೂಡ ಅದಕ್ಕೆ ಪೂರಕವಾಗಿ ಉಪರಾಜಧಾನಿಗಳನ್ನು ಮಾಡಿಕೊಂಡು, ವಾಸ್ತುಶಿಲ್ಪಗಳಿಗೆ ಪ್ರೋತ್ಸಾಹ ನೀಡಿದರು. ಅಲ್ಲದೆ ವರ್ಣ ಚಿತ್ರಕ್ಕೂ ಪ್ರಶಸ್ತಿ ನೀಡಿದ ದಖನಿ ರಾಜ್ಯ ವಂಶಸ್ಥರಲ್ಲಿ ಮೊದಲಿಗರಾಗಿದ್ದಾರೆ. ಸಂಗೀತ, ಸಾಹಿತ್ಯ, ಕ್ಷೇತ್ರಕ್ಕೆ ಪ್ರತ್ಯೇಕ ನಗರ ನಿರ್ಮಿಸಿ ಅಲ್ಲಿ ಸಂಗೀತಕ್ಕೆ ಪ್ರೋತ್ಸಾಹ ನೀಡುವ ಮೂಲಕ ನವರಸಪುರವೆಂಬ ನಗರ ನಿರ್ಮಿಸಿ ಹಲವಾರು ಧಾರ್ಮಿಕೇತರ ಕಟ್ಟಡಗಳನ್ನ ನಿರ್ಮಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು:**


1. ಬೆನ್ನೂರ ಎಂ. ಎನ್., (2018) ಬಿಜಾಪುರ ಆದಿಲ್ ಶಾಹಿಗಳ ಕಾಲದ ಧಾರ್ಮಿಕೇತರ ಕಟ್ಟಡಗಳು ಪಿ. ಎಚ್. ಡಿ. ಮಹಾ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
2. ಚೌವ್ಹಾನ. ರವಿ. ಎನ್., (2004) ಆದಿಲ್ ಶಾಹಿಗಳ ಕಾಲದ ಸ್ಮಾರಕಗಳು, ಉಪನ್ಯಾಸ ಗ್ರಂಥ ಮಾಲೆ. ಪ್ರಕಾಶನ–ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ಅಣ್ಣಿಗೇರಿ. ಎ. ಎಂ., (1980) ಶಿಲ್ಪಕಲಾ ವೈಭವ, ಪ್ರಕಾಶಕರು – ಶ್ರೀಮತಿ ಗಂಗೂತಾಯಿ ಅಣ್ಣಿಗೇರಿ ಹೊಸ ಪತ್ರಾವಳಿ ಚಾಳ, ಧಾರವಾಡ.
4. ಜೋಶಿ ಎಸ್. ಕೆ., (2007–08) ಬಿಜಾಪುರದ ನಾಡಿನ ಕೋಟಿ ಕೊತ್ತಲಗಳು ಭಾಗ –1, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ ಧಾರವಾಡ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.